# ಕಾರ್ಯನೀತಿ ಸಂಕ್ಷೇಪ #3

iihs™
INDIAN INSTITUTE FOR
HUMAN SETTLEMENTS

**ಕಾರ್ಯನೀತಿಯ ಗತಿಯನ್ನು ಸ್ಥಿರಗೊಳಿಸುವುದು/ಬಲಪಡಿಸುವುದು**

## ಭಾರತದಲ್ಲಿ ನಗರ ನೀರು ಸರಬರಾಜು ಹಾಗೂ ನೈರ್ಮಲ್ಯ



## ಪರಿಚಯ

ಭಾರತದಲ್ಲಿ ನಗರ ಪ್ರದೇಶಗಳೆಂದು ವರ್ಗೀಕರಿಸಲಾದ ಪ್ರದೇಶಗಳಲ್ಲಿ ವಾಸವಿರುವ 31 ಪ್ರತಿಶತದಷ್ಟು ಜನಸಂಖ್ಯೆಯು (377 ದಶಲಕ್ಷ, ಜನಗಣತಿ 2011) 2031ರ ವೇಳೆಗೆ 600 ದಶಲಕ್ಷಕ್ಕೆ ಬೆಳೆಯುವ ಸಾಧ್ಯತೆ ಇದೆ (ಎಚ್‌ಪಿಇಸಿ). ಬೆಳೆಯುತ್ತಿರುವ ಈ ಜನಸಂಖ್ಯೆಗೆ ಕುಡಿಯುವ ನೀರನ್ನು (81,000 ಎಮ್‌ಎಲ್‌ಡಿ) ಒದಗಿಸುವ ಪ್ರಕ್ರಿಯೆಯು, ಈಗಾಗಲೇ ಕಡಿಮೆಯಾಗುತ್ತಿರುವ ಭಾರತದ ನೀರಿನ ಸಂಪನ್ಮೂಲಗಳ ಮೇಲೆ ಗಣನೀಯವಾದ ಒತ್ತಡವನ್ನು ಹೇರುವುದರೊಂದಿಗೆ, ತ್ಯಾಜ್ಯ ನೀರಿನ ಸಂಗ್ರಹಣೆ ಹಾಗೂ ಸುರಕ್ಷಿತ ವಿಲೇವಾರಿಯು (65,000 ಎಮ್‌ಎಲ್‌ಡಿ) ನಗರ ಪ್ರದೇಶಗಳಲ್ಲಿ ಗಂಭೀರ ಸವಾಲುಗಳನ್ನು ಒಡ್ಡುತ್ತದೆ/ಒಡ್ಡಲಿದೆ.

ಭಾರತವು ಸ್ವಚ್ಛ ಹಾಗೂ ಆರೋಗ್ಯವಂತವಾಗಿ, ಎಲ್ಲರಿಗೂ ನೈರ್ಮಲ್ಯ ಲಭ್ಯತೆ ಮತ್ತು ತ್ಯಾಜ್ಯ ನಿರ್ವಹಣೆಯನ್ನು ವಿಸ್ತರಿಸುವಲ್ಲಿ ಸ್ವಚ್ಛ ಭಾರತ ಅಭಿಯಾನವು (ಎಸ್‌ಬಿಎ) ಮಹತ್ತರವಾದ/ಗಮನಾರ್ಹವಾದ ಪ್ರಾರಂಭವಾಗಿದೆ. ಇದಕ್ಕೆ ಪೂರಕವಾಗಿ, ಮೂಲಭೂತ ವ್ಯವಸ್ಥೆಗಳು ಹಾಗೂ ಸೇವೆಗಳ ಸುಧಾರಣೆಯಿಂದ ನಗರಗಳ ಸುಸ್ಥಿರ ಬೆಳವಣಿಗೆಯನ್ನು ಸಾಧಿಸುವುದರೊಂದಿಗೆ, ನಾಗರಿಕರು ಸಾರ್ವಜನಿಕ ಆರೋಗ್ಯ ಹಾಗೂ ಪಾರಿಸಾರಿಕ ಲಾಭಗಳನ್ನೂ ಪಡೆಯುವಂತೆ ಖಚಿತಪಡಿಸಿಕೊಳ್ಳಬೇಕು.

## I. ನಗರ ನೀರು ಹಾಗೂ ನೈರ್ಮಲ್ಯದ ವಿಚಾರವು ಏಕೆ ಮುಖ್ಯ?

ನೀರು ಜೀವನದ ಆಧಾರ; ಅತಿಸಾರವೂ ಸೇರಿದಂತೆ, ಅಸಮರ್ಪಕ ನಗರ ನೀರು ಹಾಗೂ ನೈರ್ಮಲ್ಯದಿಂದ ಸಾರ್ವಜನಿಕ ಆರೋಗ್ಯದ ಮೇಲೆ ಹಲವಾರು ತೀವ್ರತರವಾದ ಪರಿಣಾಮಗಳು ಉಂಟಾಗುತ್ತವೆ. ಜಾಗತಿಕವಾಗಿ, ಅತಿಸಾರವು 5 ವರ್ಷಗಳ ಒಳಗಿನ ಮಕ್ಕಳ ಸಾವಿಗೆ ಎರಡನೆಯ ಮುಖ್ಯ ಕಾರಣವಾಗಿದೆ (ಯುನಿಸೆಫ್2 2010): ಜಾಗತಿಕವಾಗಿ, 25 ಪ್ರತಿಶತದಷ್ಟು ಅತಿಸಾರ-ಸಂಬಂಧಿತ ಮರಣಗಳು ಭಾರತದಲ್ಲೇ ಸಂಭವಿಸುತ್ತವೆ. ನೈರ್ಮಲ್ಯದ ಕೊರತೆಯಿಂದ ಅಪೌಷ್ಟಿಕತೆ ಉಂಟಾಗಿ, ಅದರಿಂದ ಕುಂಠಿತ ಬೆಳವಣಿಗೆ ಹಾಗೂ ದೀರ್ಘಾವಧಿಯ ಗ್ರಹಣ-ಸಂಬಂಧಿತ ಖಾಯಿಲೆಗಳಿಗೆ ಎಡೆಮಾಡಿಕೊಡುತ್ತದೆ (ಸ್ಪಿಯರ್ಸ್, 2013)

ಭಾರತದಲ್ಲಿ, (ಮೇಲ್ಮೈ ನೀರು ಹಾಗೂ ಅಂತರ್ಜಲ ಸೇರಿದಂತೆ) ನೀರಿನ ಮಾಲಿನ್ಯಕ್ಕೆ ಪ್ರಮುಖ ಕಾರಣವೆಂದರೆ ಮಲದಿಂದ ಉಂಟಾಗುವ ಕಶ್ಮಲೀಕರಣ. ಕಡಿಮೆ ಆಗುತ್ತಿರುವ ನೀರಿನ ಲಭ್ಯತೆಯ ಚೌಕಟ್ಟಿನಲ್ಲಿ/ಕಾರಣದಿಂದ, ನಗರ ಪ್ರದೇಶಗಳಲ್ಲಿ ಬೆಳೆಯುತ್ತಿರುವ ನೀರಿನ ಬೇಡಿಕೆಯು ಮತ್ತೊಂದು ಪ್ರಮುಖ ಕಳಕಳಿಯಾಗಿದೆ. ಹವಾಮಾನ ಬದಲಾವಣೆಯು, ನಗರ ಪ್ರದೇಶಗಳಲ್ಲಿ ನೀರಿನ ಲಭ್ಯತೆಯನ್ನು ಮತ್ತಷ್ಟು ಕಡಿಮೆ ಮಾಡುವ ಸಾಧ್ಯತೆ ಇದೆ.

## II. ಭಾರತದ ನಗರಗಳಲ್ಲಿ ನೀರು ಹಾಗೂ ನೈರ್ಮಲ್ಯ

**ಸುಮಾರು 40 ಪ್ರತಿಶತದಷ್ಟು ನಗರದ ಕುಟುಂಬಗಳಿಗೆ ಸಾರ್ವಜನಿಕ ಸರಬರಾಜು ಲಭ್ಯವಿಲ್ಲ; ಹಾಗಾಗಿ, ಅವರು ನೀರಿನ ಇತರ ಮೂಲಗಳ ಮೇಲೆ ಅವರು ಅವಲಂಬಿಸಬೇಕಾಗುತ್ತದೆ.**



ತ್ಯಾಜ್ಯದ ಸಂಪೂರ್ಣ ಸಂಸ್ಕರಣೆಯನ್ನು ಮಾಡಲು, ಕೇವಲ ಒಳಚರಂಡಿಯ ಸಂಸ್ಕರಣೆ ಮಾತ್ರವಲ್ಲ, ಸ್ಥಳದಲ್ಲೇ ವಿಲೇವಾರಿ ಮಾಡುವ ವ್ಯವಸ್ಥೆಗಳಿಂದ ರೊಚ್ಚುತೊಟ್ಟಿಯ ಕಚ್ಚಾವಸ್ತು/ಚರಂಡಿಯ ಕೊಳಕು/ಹೊಲಸಿನ ವಿಲೇವಾರಿ/ಸಂಸ್ಕರಣೆಯತ್ತಲೂ ಗಮನ ಹರಿಸಬೇಕು. ಇದನ್ನು ಮಾಡಲು ನಗರದಲ್ಲಿ ಚರಂಡಿ ರೊಚ್ಚನ್ನು ಸಂಗ್ರಹಣ ಮಾಡುವ ವಾಹನಗಳ ನಿಯಂತ್ರಣದೊಂದಿಗೆ, ನಿರ್ದಿಷ್ಟ ಸ್ಥಳಗಳಲ್ಲಿ ಮೂಲಭೂತ ರೊಚ್ಚುತೊಟ್ಟಿ/ಚರಂಡಿಯ ಕೊಳಕಿನ ಸಂಸ್ಕರಣಾ ಸವಲತ್ತುಗಳನ್ನು ಉತ್ತೇಜಿಸಬೇಕು.

### C. ಹಂತವಾರು ಸುಧಾರಣೆ ಮತ್ತು ಸೂಕ್ಷ್ಮ ಮೇಲ್ವಿಚಾರಣೆಯ ಆರಂಭ

ಲಭ್ಯತೆಯ ಸಾರ್ವತ್ರಿಕರಣ ಹಾಗೂ ತ್ಯಾಜ್ಯಗಳನ್ನು 100 ಪ್ರತಿಶತ ಸಂಸ್ಕರಣೆ ಮಾಡಲು, ತಕ್ಷಣದ, ಮಧ್ಯಂತರ ಹಾಗೂ ಹಂತವಾರು ಪರಿಹಾರಗಳ ಅಗತ್ಯವಿದೆ. ಉದಾಹರಣೆಗೆ, ಇದಕ್ಕಾಗಿ ಸ್ಥಳದಲ್ಲೇ ವಿಲೇವಾರಿ ಮಾಡುವ ವ್ಯವಸ್ಥೆಗಳನ್ನು ನಗರಗಳಲ್ಲಿ ಪರಿಗಣಿಸುವ ಅಗತ್ಯ ಒದಗಬಹುದು. ಅಂತೆಯೇ, 24ಥ7ರ ನೀರು ಸರಬಜಾಜಿನ ಮಾದರಿಯನ್ನು ಅತ್ಯಂತ ಸೂಕ್ತವೆಂದು ಉಲ್ಲೇಖಿಸಲಾಗುತ್ತದೆ. ಆದರೆ, ಸಾರ್ವತ್ರಿಕ ವ್ಯಾಪ್ತಿಯನ್ನು ಸಾಧಿಸಲು, ನಗರಗಳು ಹಂತಹಂತದ ಸುಧಾರಣೆಗಳನ್ನು ಕೈಗೊಳ್ಳಬೇಕಾಗುತ್ತದೆ. ಎಲ್ಲ ಅಗತ್ಯ ಫಲಿತಾಂಶಗಳನ್ನು ಪೂರೈಸುವ ಬಗೆಯತ್ತ ಗಮನ ಹರಿಸುವ, ದೀರ್ಘಕಾಲೀನ ಯೋಜನೆಯನ್ನು ರಾಜ್ಯ ಕಾರ್ಯತಂತ್ರಗಳು ಹಾಗೂ ನಗರದ ಯೋಜನೆಗಳು ಸ್ಪಷ್ಟವಾಗಿ ವಿವರಿಸಬೇಕು.

### D. ಸ್ವತ್ತುಗಳ ನಿರ್ವಹಣೆಯಲ್ಲಿ ಜನರನ್ನು ತೊಡಗಿಸುವುದು ಮತ್ತು ಆರ್ಥಿಕ ಹೂಡಿಕೆ

ಕಾರ್ಯಾಚರಣೆ ಮತ್ತು ನಿರ್ವಹಣೆ (ಔ&ಒ) ಯ ಮೂರು ಪ್ರಮುಖ ಅಂಶಗಳಾದ ಹಣಕಾಸು, ವ್ಯವಸ್ಥೆ ಮತ್ತು ಪ್ರಕ್ರಿಯೆಗಳು, ಮತ್ತು ಸಾಮರ್ಥ್ಯದ ಬಗ್ಗೆ ಕೇಂದ್ರೀಕರಿಸುವ ಮೂಲಕ ಭಾರತೀಯ ನಗರಗಳು ಪ್ರಸ್ತುತ ವಿಷ ವರ್ತುಲವಾದ ನಿರ್ಮಿಸು-ನಿರ್ಲಕ್ಷಿಸು-ಮರುನಿರ್ಮಿಸು ಪ್ರಕ್ರಿಯೆಯಿಂದ ದೂರ ಸರಿಯುವುದು ಅಗತ್ಯ: ಈ ಕಾರ್ಯಗಳನ್ನು ರಾಜ್ಯಗಳು ಮಧ್ಯಂತರವಾಗಿ ಒದಗಿಸುವ ಅವಶ್ಯಕತೆ ಇರಬಹುದು. ಇದಲ್ಲದೆ, ನಗರ ಸ್ಥಳೀಯ ಸಂಸ್ಥೆಗಳು ವಿವಿಧ ತಂತ್ರಜ್ಞಾನದೊಂದಿಗೆ ಹೊಂದಿಕೊಂಡಿರುವ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಯೋಜನಾ ಹಂತದಲ್ಲಿಯೇ ಒದಗಿಸುವುದು ಅಗತ್ಯ.

### E. ಜಲ ವಲಯದ ಆಡಳಿತ ಮತ್ತು ಸೇವಾ ಹಂಚಿಕೆಯ ಸುಧಾರಣೆಯ ಕೇಂದ್ರಕ್ಕೆ ಜನರು ಮತ್ತು ನಾಗರಿಕರನ್ನು ತರುವುದು

ನಾಗರಿಕರು ವಿಶೇಷವಾಗಿ ಬಡವರು ಮತ್ತು ದುರ್ಬಲ ಸಮುದಾಯದವರಿಗೆ ಸೇವೆಯನ್ನು ಒದಗಿಸುವವರ ಹೊಣೆಗಾರಿಕೆಯನ್ನು ಹೆಚ್ಚಿಸುವ ಅಗತ್ಯವಿದೆ. ವಲಯದಲ್ಲಿನ ಗ್ರಾಹಕರು ಮತ್ತು ಸೇವೆ ಒದಗಿಸುವವರೂ ಇಬ್ಬರ ಹಿತಾಸಕ್ತಿಗಳನ್ನು ಸಮಾನವಾಗಿ ನಿಯಂತ್ರಿಸುವುದು ಅಗತ್ಯವೂ ಇದೆ.

### 2. ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಯನ್ನು ಚುರುಕುಗೊಳಿಸುವುದು

ಎಲ್ಲಾ ಹಂತಗಳಲ್ಲಿ, ವಿಶೇಷವಾಗಿ ಸಣ್ಣ ನಗರ ಸ್ಥಳೀಯ ಸಂಸ್ಥೆಗಳು, ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಪ್ರಸ್ತುತವಿರುವ ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಚುರುಕುಗೊಳಿಸಬೇಕು ಮತ್ತು ಆದ್ಯತೆ ಇರುವ ಕ್ಷೇತ್ರಗಳನ್ನು ಗುರುತಿಸಲು ಸೂಕ್ತ ಅಗತ್ಯ ವಿಶ್ಲೇಷಣೆಯನ್ನು ಕೈಗೊಳ್ಳಬೇಕು. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನೆಗೆ ಅಗತ್ಯವಿರುವ ಪ್ರಕ್ರಿಯೆಯ ಅವಶ್ಯಕತೆಯೂ ಇದೆ.

### 3. ಹಣಕಾಸಿಗೆ ಸಂಬಂಧಿಸಿದ ವಿಚಾರದ ಮರುಚಿಂತನೆ

ವಲಯದಲ್ಲಿ ಹೆಚ್ಚಿನ ಹಣಕಾಸಿನ ಅಗತ್ಯವಿರುವುದರ ಜೊತೆಗೆ, ಬೃಹತ್ ಕೊರತೆಗಳನ್ನು ನೀಗಿಸಲು, ಹೂಡಿಕೆಗಳ ತರ್ಕಬದ್ಧಗೊಳಿಸುವ ಅಗತ್ಯವೂ ಇದೆ. ವಿಸ್ತೃತ ಶ್ರೇಣಿಯ ತಂತ್ರಜ್ಞಾನಗಳು ಹಾಗೂ ಇತ'ರ ವೃದ್ಧಿಶೀಲ/ಹಂತಾವಾರು ಬದಲಾವಣೆಗಳನ್ನು ಉತ್ತೇಜಿಸುವ ಮೂಲಕ, ಹಣಕಾಸಿನ ಅಗತ್ಯಗಳನ್ನು ಕಡಿತಗೊಳಿಸಬಹುದು. 'ಯಂತ್ರಾಂಶ'ದಿಂದ 'ಮೃದು' ಘಟಕಗಳತ್ತ ಅನುದಾನದ ಸ್ವಲ್ಪ ಭಾಗವನ್ನಾದರೂ ಮರುನಿರ್ದೇಶಿಸಬೇಕು. ಪ್ರಾದೇಶಿಕ ಸಂದರ್ಭಗಳಿಗೆ ಅನುಗುಣವಾಗಿ ಅನುದಾನ/ಹಣಕಾಸಿನ ವ್ಯವಸ್ಥೆಯು ನಮ್ಯವಾಗಿದ್ದು, ಅಪೇಕ್ಷಿತ ಫಲಿತಾಂಶಗಳನ್ನು ಪ್ರೋತ್ಸಾಹಿಸಬೇಕು.

### ರಾಜ್ಯ ಮತ್ತು ನಗರ ಸರ್ಕಾರಗಳ ಪಾತ್ರ

ಭಾರತ ಸರ್ಕಾರವು ತಮ್ಮ ನಗರಗಳ ಕಾರ್ಯತಂತ್ರಗಳನ್ನು ರೂಪಿಸಲು ಅಗತ್ಯವಿರುವ ಆರ್ಥಿಕ, ಸಾಮರ್ಥ್ಯ ಅಭಿವೃದ್ಧಿ ಮತ್ತು ಕಾರ್ಯಕ್ರಮ ಹೊಂದಿಕೊಳ್ಳಲು ಅಗತ್ಯವಿರುವ ಬೆಂಬಲವನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕು. ರಾಜ್ಯ ಸರ್ಕಾರಗಳು ತಮ್ಮ ನಗರಗಳು ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಲು, ಹೆಚ್ಚುವರಿ ಆರ್ಥಿಕ ಸಹಾಯ ಮತ್ತು ಮೇಲ್ವಿಚಾರಣೆ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಮಾಡುವುದು ಅಗತ್ಯ. ದೀರ್ಘಾವಧಿಯಲ್ಲಿ, ನಗರ ಸರ್ಕಾರಗಳು ನಗರಾದ್ಯಂತ ಮಾಡುವ ಯೋಜನೆಗಳು, ಆದ್ಯತೆ, ಯೋಜನಾ ಅನುಷ್ಠಾನ, ಸೇವೆಗಳನ್ನು ಒದಗಿಸುವುದು ಮತ್ತು ಕಾರ್ಯಾಚರಣೆಗಳ ಸಂಪೂರ್ಣ ಸ್ವಾಮ್ಯತೆಯನ್ನು ಪಡೆದುಕೊಳ್ಳುವುದು ಅಗತ್ಯ. ನಗರ ಸ್ಥಳೀಯ ಸಂಸ್ಥೆಗಳು, ವಿಶೇಷವಾಗಿ ಸಣ್ಣ ಸಂಸ್ಥೆಗಳಿಗೆ ಈ ಎಲ್ಲಾ ವಿಷಯಗಳ ಬಗ್ಗೆ ದೀರ್ಘಾವಧಿ ಬೆಂಬಲದ ಅಗತ್ಯವಿರುತ್ತದೆ. ಸ್ವಚ್ಛ ಭಾರತ ಅಭಿಯಾನ ಮತ್ತು ಉತ್ತರಾಧಿಕಾರಿಯಾದ ನಗರ ಅಭಿವೃದ್ಧಿ ಮಿಷನ್ ಭಾರತದ ನಗರಗಳನ್ನು ಸ್ವಚ್ಛ, ಸುಸ್ಥಿರ ಮತ್ತು ಸ್ಪಂದನಾಶೀಲವನ್ನಾಗಿಸಿ ಬದಲಾಯಿಸುವ ಭರವಸೆಯನ್ನು ನೀಡುತ್ತದೆ.

## ಹೆಚ್ಚಿನ ಓದಿಗಾಗಿ

ಐಐಎಚ್‌ಎಸ್, 2014, ಸಸ್ಟೇನಿಂಗ್ ಪಾಲಿಸಿ ಮೊಮೆಂಟಮ್: ಅರ್ಬನ್ ವಾಟರ್ ಆಂಡ್ ಸಾನಿಟೇಷನ್ ಇನ್ ಇಂಡಿಯಾ, ಐಐಎಚ್‌ಎಸ್ ಆರ್‌ಎಫ್ ಪೇಪರ್ ಆನ್ ವಾಟರ್ ಆಂಡ್ ಸಾನಿಟೇಷನ್

ಮೆಕೆನ್ಜಿ, ಡಿ., ಅಂಡ್ ರೇ, ಐ. (2009). ಅರ್ಬನ್ ವಾಟರ್ ಸಪ್ಲೈ ಇನ್ ಇಂಡಿಯಾ: ಸ್ಟೇಟಸ್, ರಿಫಾರ್ಮ್ ಆಪ್ಷನ್ಸ್ ಆಂಡ್ ಪಾಸಿಬಲ್ ಲೆಸನ್ಸ್. ವಾಟರ್ ಪಾಲಿಸಿ, 11 (4), 442-460.

ನಾರಾಯಣ್, ಎಸ್.(2012ಎ). ಎಕ್ಸ್‌ಕ್ರೀಟಾ ಮ್ಯಾಟರ್ಸ್ (ವಾಲ್ಯೂಮ್. 7( ವಾಲ್ಯೂಮ್1)). ನ್ಯೂದಿಲ್ಲಿ: ಸೆಂಟರ್ ಫಾರ್ ಸೈನ್ಸ್ ಆಂಡ್ ಎನ್‌ವೈರನ್‌ಮೆಂಟ್.

ಡಬ್ಲ್ಯುಎಸ್‌ಪಿ (2008). ರಿವ್ಯೂ ಆಫ್ ಸ್ಯುವರೇಜ್ ಆಂಡ್ ಸಾನಿಟೇಷನ್ ಇಂಟರ್ವೆನ್ಷನ್ಸ್ ಇನ್ ಅರ್ಬನ್ ಇಂಡಿಯಾ. ನ್ಯೂದಿಲ್ಲಿ: ವಾಟರ್ ಆಂಡ್ ಸಾನಿಟೇಷನ್ ಪ್ರೋಗ್ರಾಂ-ಸೌತ್ ಏಷಿಯಾ.


iihs™
INDIAN INSTITUTE FOR
HUMAN SETTLEMENTS

IIHS Bangalore City Campus
No. 197/36, 2nd Main Road
Sadashiva Nagar
Bangalore 560 080. India
T +91 80 6760 6666

www.iihs.co.in | info@iihs.co.in

ಸುಮಾರು ಮೂರನೆಯ ಎರಡು ಭಾಗದಷ್ಟು ಮನೆಗಳಿಗೆ ನೀರಿನ ಲಭ್ಯತೆ ಇಲ್ಲ, ಹಾಗೂ 70 ಪ್ರತಿಶತ ಮನೆಗಳು ಒಂದಲ್ಲ ಒಂದು ರೂಪದಲ್ಲಿ ಸವಲತ್ತುಗಳನ್ನು ಹಂಚಿಕೊಳ್ಳುತ್ತವೆ.

ನೀರಿನ ಮೂಲಕ್ಕೆ ಅನುಗುಣವಾಗಿ ಮನೆಗಳ ವಿಂಗಡನೆ




ಪೈಪ್ ಮೂಲಕ ಸರಬರಾಜು ಆಗುವ ನೀರಿನ ಲಭ್ಯತೆ ಸೇವಾ ಮಟ್ಟಗಳ ಸೂಚಕವೇನಲ್ಲ. ಅತ್ಯಂತ ಹೆಚ್ಚಿನ ಕಳಕಳಿಯ ವಿಷಯವೆಂದರೆ, ಬಹುತೇಕ ನಗರಗಳು ಸಾಕಷ್ಟು ಪ್ರಮಾಣದ ನೀರನ್ನು ಒದಗಿಸುವುದಿಲ್ಲ: ನಗರಗಳಲ್ಲಿ ಪ್ರತಿದಿನವೂ ತಲಾ 135 ಎಲ್‌ಪಿಸಿಡಿಯಷ್ಟು ನೀರು ಸರಬರಾಜು ಆಗುವ ಬದಲು, ಅಂದಾಜು ಕೇವಲ ತಲಾ 69 ಎಲ್‌ಪಿಸಿಡಿಯಷ್ಟು ನೀರನ್ನು ಪಡೆದುಕೊಳ್ಳಲಾಗುತ್ತದೆ. ಬಹುತೇಕ ಎಲ್ಲ ನಗರಗಳಲ್ಲೂ ನೀರು ಸರಬರಾಜು ಬಿಟ್ಟು ಬಿಟ್ಟು ಬರುವುದರೊಂದಿಗೆ /ಒಮ್ಮೊಮ್ಮೆ ಬರುವುದರೊಂದಿಗೆ, ಅದರ ಗುಣಮಟ್ಟದ ಬಗ್ಗೆಯೂ ಖಾತರಿ ಇರುವುದಿಲ್ಲ.

ಗೌಣವಾದ ಸೇವಾ ಮಾನದಂಡಗಳ ಪರಿಣಾಮವಾಗಿ, ಕುಟುಂಬಗಳು ಪರಿಸ್ಥಿತಿಯನ್ನು ನಿಭಾಯಿಸುವ ಅನೇಕ ರೀತಿಯ ವ್ಯವಸ್ಥೆಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ; ಅದರೊಂದಿಗೆ, ನೀರಿನ ಗುಣಮಟ್ಟದ ಅಪಾಯ, ಹೆಚ್ಚಿನ ಸಮಯ ಹಾಗೂ ಹಣಕಾಸಿನ ಹೊರೆಯೂ ಉಂಟಾಗುತ್ತದೆ. ಇದರ ಪೈಕಿ ಅತ್ಯಂತ ಪ್ರಮುಖವಾದ ನಿಭಾಯಿಸುವ ವ್ಯವಸ್ಥೆಯೆಂದರೆ, ನೀರಿನ ಅನೇಕ ಮೂಲಗಳ ಮೇಲೆ ಅವಲಂಬಿತವಾಗುವುದು.
ಕುಟುಂಬ ಮಟ್ಟದಲ್ಲಿ ಅತ್ಯಂತ ಕಳಕಳಿಯ ವಿಷಯವೆಂದರೆ, ಕಲುಷಿತಗೊಂಡ ನೀರು ಹಾಗೂ ಅದು ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮಗಳು. ಕುಟುಂಬ ಮಟ್ಟದಲ್ಲಿ ಸರಬರಾಜಾಗುವ ನೀರಿನ ಗುಣಮಟ್ಟವನ್ನು ಕುರಿತಾಗಿ ಸೀಮಿತ ಮೇಲ್ವಿಚಾರಣೆ ಹಾಗೂ ಮಾಹಿತಿ ಲಭ್ಯವಿದ್ದು, (ಮೂಲವು ಸಾರ್ವಜನಿಕ ಸರಬರಾಜು, ಖಾಸಗಿ ಸರಬರಾಜು ಅಥವಾ ಸ್ವಯಂ-ಸರಬರಾಜು ಆಗಿರಬಹುದು) ಅದು ಗಂಭೀರವಾದ ಕಳಕಳಿಯ ವಿಷಯವಾಗಿದೆ.


ನಗರ ಮಟ್ಟದಲ್ಲಿ, ಅದರಲ್ಲೂ ಸಣ್ಣ ನಗರಗಳಲ್ಲಿ, ಸಾರ್ವಜನಿಕ ನೀರು ಸರಬರಾಜಿನ ವಿಸ್ತರಣೆ ಹಾಗೂ ಚುರುಕುಗೊಳಿಸುವಿಕೆ ಅತ್ಯಂತ ಕ್ಲಿಷ್ಟಕರ ವಿಷಯವಾಗಿದೆ. ಇದರ ಹೋಲಿಕೆಯಲ್ಲಿ, ದೊಡ್ಡ ನಗರಗಳಲ್ಲಿ, ಮೂಲಭೂತ ಸವಲತ್ತುಗಳ ಕೊರತೆಯಷ್ಟೇ ಹೆಚ್ಚು ನೀರಿನ ಕಳವೂ ಕೂಡ ಅಷ್ಟೇ ಸವಾಲಿನ ವಿಷಯವಾಗಿದೆ. ಭಾರತದ ನಗರಗಳಲ್ಲಿ ಅಸಮರ್ಪಕ ಕಾರ್ಯಾಚರಣೆ ಹಾಗೂ ನಿರ್ವಹಣೆಯಿಂದ ನೀರು ಸರಬರಾಜು ವ್ಯವಸ್ಥೆಗಳು ಸೊರಗುತ್ತಿವೆ.

ಭಾರತದ ನಗರಗಳು ಅಂತರ್ಜಲ ಹಾಗೂ ಮೇಲ್ಮೈನೀರಿನ ಮೇಲೆ ಮಿಶ್ರ ಅವಲಂಬನೆಯನ್ನು ಹೊಂದಿದೆ. ನಗರ ಪ್ರದೇಶಗಳು ಬಹಳ ದೂರದಿಂದ ನೀರನ್ನು ಪಡೆಯುವುದು ಹೆಚ್ಚುತ್ತಲೇ ಇದೆ.



ನಗರಗಳಲ್ಲಿ ಅಂತರಜಲದ ಮೇಲಿನ ಅವಲಂಬನೆ ತೀವ್ರತರ ರೀತಿಯಲ್ಲಿ ಹೆಚ್ಚುತ್ತಿದೆ:
71 ನಗರಗಳ ನೀರಿನ ಬಳಕೆಯ ಮಾದರಿಯನ್ನು ನೋಡಿದಾಗ, ಅದರ ಪೈಕಿ 58 ಪ್ರತಿಶತವು ಒಂದಲ್ಲ ಒಂದು ರೀತಿಯಲ್ಲಿ ಅಂತರ್ಜಲದ ಮೂಲದ ಮೇಲೆ ಅವಲಂಬಿತವಾಗಿರುವುದು ಕಂಡುಬಂದಿತು.

ಭಾರತದ ನಗರವಾಸಿ ಕುಟುಂಬಗಳಲ್ಲಿ ಶೌಚಾಲಯ ಸವಲತ್ತುಗಳ ಹಂಚಿಕೆ, 2011




**ಸೂಕ್ತ ನೈರ್ಮಲ್ಯ ವ್ಯವಸ್ಥೆಗೆ ಲಭ್ಯತೆ ಇಲ್ಲದಿರುವ ಸುಮಾರು 60 ದಶಲಕ್ಷ (17 ದಶಲಕ್ಷ ಕುಟುಂಬಗಳು) ಜನರಿದ್ದಾರೆ**: 12 ಪ್ರತಿಶತ (ಕುಟುಂಬಗಳು) ಬಯಲು ಶೌಚಕ್ಕೆ ಮೊರೆ ಹೋಗುತ್ತಾರೆ, 2 ಪ್ರತಿಶತಕ್ಕೆ 'ಅಸುಧಾರಿತ/ಗೌಣ' ನೈರ್ಮಲ್ಯದ ವ್ಯವಸ್ಥೆ ಹೊಂದಿದ್ದರೆ, 7 ಪ್ರತಿಶತ ಸಾರ್ವಜನಿಕ ಶೌಚಾಲಯಗಳನ್ನು ಬಳಕೆ ಮಾಡುತ್ತಾರೆ.

ಸುರಕ್ಷಿತ ತ್ಯಾಜ್ಯ ನೀರಿನ ಸಂಗ್ರಹಣೆ, ಅದರ ಸಾಗಣೆ ಹಾಗೂ ಸಂಸ್ಕರಣೆಯಲ್ಲಿ ಅಪಾರ ಕೊರತೆಗಳಿವೆ. ಕೇವಲ ಮೂರನೆಯ ಒಂದು ಭಾಗದಷ್ಟು ಕುಟುಂಬಗಳು ಒಳಚರಂಡಿ ಜಾಲಕ್ಕೆ ಸಂಪರ್ಕ ಹೊಂದಿದ್ದು, ಸಂಗ್ರಹಣಾ ಸಾಮರ್ಥ್ಯವು ಕಡಿಮೆಯಾಗೇ ಉಳಿದಿದೆ. ಸ್ಥಳದಲ್ಲೇ ವಿಲೇವಾರಿ ಮಾಡುವ ವ್ಯವಸ್ಥೆಗಳು, ಅಂದರೆ, ರೊಚ್ಚು ತೊಟ್ಟಿ/ ಸೆಪ್ಟಿಕ್ ಟ್ಯಾಂಕ್ ಹಾಗೂ ಗುಂಡಿ ಪಾಯಿಖಾನೆಗಳು ಅಸಮರ್ಪಕ ವಿನ್ಯಾಸ, ಕಳಪೆ ಕಾಮಗಾರಿ ಹಾಗೂ ಅಸಮರ್ಪಕ ನಿರ್ವಹಣೆಯಿಂದ, ಸಮುದಾಯಗಳನ್ನು ಮಲದಿಂದ ಉಂಟಾಗುವ ಕಶ್ಮಲತೆಯ ಅಪಾಯಕ್ಕೆ ಒಡ್ಡುತ್ತದೆ. ಮಲದ ರಾಡಿಯ ಸಂಸ್ಕರಣೆಗೆ ಅತ್ಯಂತ ಕಡಿಮೆ ಸವಲತ್ತುಗಳು ಲಭ್ಯವಿವೆ. **ಸುಮಾರು 78 ಪ್ರತಿದಷ್ಟು ಒಟ್ಟಾರೆ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡದೆ, ಹಾಗೆಯೇ ಪರಿಸರಕ್ಕೆ ಬಿಡಲಾಗುತ್ತದೆ.**

**ನಗರದ ಬಡಜನರಿಗೆ ಇರುವ ಲಭ್ಯತೆ**: ತಮ್ಮ ಮನೆಗಳಲ್ಲಿ ನೀರಿನ ಸವಲತ್ತುಗಳು ಇಲ್ಲದಿರುವ ಹಾಗೂ ಹಂಚಿಕೊಂಡ ಸವಲತ್ತುಗಳ ಮೇಲೆ ನಗರದ ಬಡಜನರು ಅವಲಂಬಿತವಾಗಿರುವ ಹೆಚ್ಚು ಸಾಧ್ಯತೆಗಳಿವೆ (ಎನ್‌ಎಸ್‌ಎಸ್‌ಒ, 2009). ಅತ್ಯಂತ ಕೆಳಸ್ಥರದಲ್ಲಿರುವ ಮೂರನೆಯ ಒಂದು ಭಾಗದ ಐದನೆಯ ಒಂದರ ನಗರದ ಕುಟುಂಬಗಳು ಬಯಲು ಶೌಚದಲ್ಲಿ ತೊಡಗಿದರೆ, ಮೇಲಿನ ಐದು ಮಟ್ಟದಲ್ಲಿರುವ ಕುಟುಂಬಗಳಲ್ಲಿ ಅದು[1] ಪ್ರತಿಶತಕ್ಕಿಂತ ಕಡಿಮೆ ಇದೆ (ಎನ್‌ಎಸ್‌ಎಸ್‌ಒ, 2009). ಅಲ್ಲದೆ, ನಗರದ ಬಡವರು ಬಹುತೇಕ ಅಧಿಕ ದಟ್ಟಣೆ ಇರುವ ಹಾಗೂ ಸ್ಥಳದಲ್ಲೇ ವಿಲೇವಾರಿ ಮಾಡುವ ನೈರ್ಮಲ್ಯ ವ್ಯವಸ್ಥೆಗಳನ್ನು ಹೊಂದಿದ ವಸಾಹತುಗಳಲ್ಲಿ ವಾಸಿಸುತ್ತಾರೆ; ಆದರೆ, ಇಂತಹ ಜನದಟ್ಟಣೆ ಇರುವ ಪ್ರದೇಶಗಳಿಗೆ ಇದು ಸೂಕ್ತವಲ್ಲದೆ ಇರಬಹುದು.

---

[1] ಜಂಟಿ ಮೇಲ್ವಿಚಾರಣಾ ಕಾರ್ಯಕ್ರಮದ ಪ್ರಕಾರ (ಜೆಎಮ್‌ಪಿ, ಯುನಿಸೆಫ್, ಡಬ್ಲ್ಯುಎಚ್‌ಒ), ಸುಧಾರಿತ ನ್ಯೆರ್ಮಲ್ಯವು ಫ್ಲಶ್ ಶೌಚಾಲಯ, ಕೊಳವೆಯುಕ್ತ ಒಳಚರಂಡಿ ವ್ಯವಸ್ಥೆ, ಸೆಪ್ಟಿಕ್ ಟ್ಯಾಂಕ್, ಫ್ಲಶ್/ಪೋರ್ ಫ್ಲಶ್ ಗುಂಡಿ ಪಾಯಿಖಾನೆ, ಗಾಳಿ-ಬೆಳಕಿನ ವ್ಯವಸ್ಥೆಯಿರುವ ಸುಧಾರಿತ ಗುಂಡಿ ಪಾಯಿಖಾನೆ (ವಿಐಪಿ), ಚಪ್ಪಡಿ ಇರುವ ಗುಂಡಿ ಪಾಯಿಖಾನೆ, ಕಂಪೋಸ್ಟಿಂಗ್ ಪಾಯಿಖಾನೆ/ಶೌಚಾಲಯವನ್ನು ಒಳಗೊಂಡಿರುತ್ತದೆ.

## III. ಸಾಂಸ್ಥಿಕ ವ್ಯವಸ್ಥೆಗಳು ಹಾಗೂ ಪ್ರಸಕ್ತ ಕಾರ್ಯನೀತಿಯ ಚೌಕಟ್ಟು

ಸಂವೈಧಾನಿಕವಾಗಿ, ನೀರು ಹಾಗೂ ನೈರ್ಮಲ್ಯವು ರಾಜ್ಯ ಹಾಗೂ ಸ್ಥಳೀಯ ಸರ್ಕಾರದ ವಿಷಯಗಳಾದರೂ, ಈ ವಲಯದ ಮೇಲೆ ಭಾರತ ಸರ್ಕಾರವು ಗಣನೀಯವಾದ ಪ್ರಭಾವವನ್ನು ಬೀರುತ್ತದೆ. ರಾಜ್ಯ ಹಾಗೂ ನಗರ ಮಟ್ಟಗಳಲ್ಲಿ, ಸಾಂಸ್ಥಿಕ ವ್ಯವಸ್ಥೆಗಳಲ್ಲಿ ವ್ಯತ್ಯಾಸವಿದ್ದರೂ, ಕೆಲವು ಸಾಮಾನ್ಯ ಅಂಶಗಳಿವೆ. ವಿವಿಧ ಮಟ್ಟಗಳು, ಸಂಸ್ಥೆಗಳು ಹಾಗೂ ಕಾರ್ಯಕ್ಷೇತ್ರಗಳ ಆದ್ಯಂತ, ಸಾಮರ್ಥ್ಯದ ತೀವ್ರ ಕೊರತೆ ಇದೆ. ಅಲ್ಲದೆ, ಸಂಬಂಧಪಟ್ಟ ಸಂಸ್ಥೆಗಳಿಗೆ ಸ್ಪಷ್ಟ ಆದೇಶದ ಕೊರತೆ ಇದ್ದು, ಅದರಿಂದ ಅಂತರಗಳು ಹಾಗೂ ಅಂತರ್‌ವ್ಯಾಪನೆಯು ಉಂಟಾಗುತ್ತದೆ. ಕೊನೆಯದಾಗಿ, ವಲಯವು ಗೌಣ ನಿಯಂತ್ರಣಕ್ಕೆ ಒಳಪಟ್ಟಿದೆ; ಪಾರಿಸಾರಿಕ ನಿಯಂತ್ರಣವು ದುರ್ಬಲವಾಗಿ ಉಳಿದಿದೆ.

ಕೊರತೆಯ ಪರಿಮಾಣವನ್ನು ಕುರಿತಾಗಿ ಭಿನ್ನಾಭಿಪ್ರಾಯಗಳಿದ್ದರೂ, ಈ ವಲಯದಲ್ಲಿ ತುರ್ತಾಗಿ ಹೆಚ್ಚಿನ ಹೂಡಿಕೆಗಳನ್ನು ಮಾಡಬೇಕೆಂಬ ಸಾಮಾನ್ಯ ಒಮ್ಮತವಿದೆ. ನೀರು ಸರಬರಾಜಿಗೆ 3.2 ಲಕ್ಷ ಕೋಟಿ ರೂಪಾಯಿಗಳು ಹಾಗೂ ಒಳಚರಂಡಿ ವ್ಯವಸ್ಥೆಗೆ 2.2 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಅಗತ್ಯವಿದೆಯೆಂದು ಅಂದಾಜು ಮಾಡಲಾಗಿದೆ (ಎಚ್‌ಪಿಇಸಿ). ಆದಾಯಕ್ಕೆ ಸಂಬಂಧಿಸಿದಂತೆ, ವೆಚ್ಚ ಹಿಂಪಡೆಯುವ ಮಟ್ಟಗಳು, ಕಡಿಮೆ ಸಂಗ್ರಹಣೆ ಹಾಗೂ ಸುಂಕಗಳಿಂದ ಕಡಿಮೆಯಾಗೇ ಉಳಿಯಿದೆ.

ಕಳೆದ ದಶಕದಲ್ಲಿ ನೀರು ಹಾಗೂ ನೈರ್ಮಲ್ಯವನ್ನು ಕುರಿತಾದ ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮಗಳೆಂದರೆ, ಜೆಎನ್‌ಎನ್‌ಯುಆರ್‌ಎಮ್ ಹೂಡಿಕೆಗಳು (2005-2014), ರಾಷ್ಟ್ರೀಯ ನಗರ ನೈರ್ಮಲ್ಯ ಕಾರ್ಯನೀತಿ (2008) ಹಾಗೂ ಇತ್ತೀಚಿನ ಸ್ವಚ್ಛ ಭಾರತ ಅಭಿಯಾನ-ನಗರ (2014). ಅನೇಕ ಅದ್ಯತೆಗಳಾದ ಸೇವೆಗಳ ಸಾರ್ವತ್ರಿಕೀಕರಣ, ಬಡವರಿಗಾಗಿ ಅವಕಾಶಗಳನ್ನು ಕಲ್ಪಿಸುವುದು, ಆದಾಯ-ರಹಿತ ನೀರಿನ ತಗ್ಗಿಸುವಿಕೆ, ತ್ಯಾಜ್ಯ ನೀರಿನ 100 ಪ್ರತಿಶತ ಸಂಸ್ಕರಣ/ಮರುಬಳಕೆ, ಅಂತರ್ಜಲದ ಜಲಧರಗಳ ರಕ್ಷಣೆ ಹಾಗೂ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸೂಕ್ತ ಸಂಪನ್ಮೂಲಗಳನ್ನು ಒದಗಿಸುವಲ್ಲಿ ಒಮ್ಮತವು ಮೂಡುತ್ತಿದೆ. ಈ ಕಾರ್ಯನೀತಿಯ ಗತಿಯನ್ನು ಸ್ಥಿರಗೊಳಿಸಿ, ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ.

## IV. ಪ್ರಮುಖ ಕ್ರಮಗಳು

ಭಾರತ ಸರ್ಕಾರವು ರಾಜ್ಯ ಸರ್ಕಾರಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಜೊತೆಗೂಡಿ ನೀರು ಮತ್ತು ನೈರ್ಮಲ್ಯ ಕ್ಷೇತ್ರವನ್ನು ಪರಿವರ್ತಿಸುವ ಅಗತ್ಯವಿದೆ.

### 1. ಫಲಿತಾಂಶಗಳು ಮತ್ತು ಪರಿಣಾಮಗಳನ್ನು ಪ್ರೋತ್ಸಾಹಿಸುವುದು, ಒಳಸುಳಿಗಳಿಂದ ದೂರ ಸರಿಯುವುದು

ನಿರ್ದಿಷ್ಟ ನಗರ ಗಡಿಗಳ ಹೊರಗೂ, ಆರೋಗ್ಯ ಮತ್ತು ಪರಿಸರದ ಮೇಲೆ ನಗರ ನೀರು ಮತ್ತು ನೈರ್ಮಲ್ಯವು ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಭಾರತ ಸರ್ಕಾರವು ಪರಿಣಾಮಗಳನ್ನು ನಿರ್ಧರಿಸಿ, ತಮ್ಮದೇ ಆದ ಚೌಕಟ್ಟಿನಲ್ಲಿ ಈ ಗುರಿಗಳನ್ನು ಸಾಧಿಸಲು ರಾಜ್ಯಗಳಿಗೆ ಹಾಗೊ ನಗರಗಳಿಗೆ ನೆರವನ್ನು ನೀಡಬೇಕು. ವಿವಿಧ ರಾಜ್ಯಗಳು ಮತ್ತು ನಗರಗಳ ನಡುವಣ (ಭೌಗೋಳಿಕ, ಸಂಪನ್ಮೂಲ ಮತ್ತು ಸರಬರಾಜು ಮಟ್ಟದ)ವ್ಯಾಪಕ ವ್ಯತ್ಯಾಸಗಳಿಂದಾಗಿ, ಈ ಫಲಿತಾಂಶಗಳನ್ನು ಸಾಧಿಸಲು ನೆರವಾಗುವ ನಿರ್ದಿಷ್ಟ ಕಾರ್ಯತಂತ್ರಗಳು ಹಾಗೂ ಯೋಜನೆಗಳನ್ನು ರಾಜ್ಯಗಳು ಮತ್ತು ನಗರಗಳು ಉತ್ತಮವಾಗಿ ನಿರ್ಧರಿಸಬಲ್ಲವು.

ಕೇವಲ ಕಾರ್ಯನೀತಿ ದಾಖಲೆಯಲ್ಲಿನ ವಿಸ್ತೃತ ಫಲಿತಾಂಶಗಳನ್ನು ರೂಪರೇಷೆಯನ್ನು ಮಂಡಿಸುವುದು ಪರ್ಯಾಪ್ತವಾಗುವುದಿಲ್ಲವೆಂದು ಎನ್‌ಯುಎಸ್‌ಪಿಯ ಅನುಭವವು ಸಾಬೀತುಪಡಿಸಿದೆ. ಫಲಿತಾಂಶಗಳನ್ನು ಸಾಧಿಸುವಲ್ಲಿ ಹಣಕಾಸು ಹಾಗೂ ಸಾಮರ್ಥ್ಯಗಳ ವೃದ್ಧಿಗೆ ಭಾರತ ಸರ್ಕಾರವು ಈ ರೀತಿಯಲ್ಲಿ ನೆರವು ನೀಡಬಹುದು:

- (ಇತ್ತೀಚಿನ ಸ್ವಚ್ಛ ಭಾರತ ಅಭಿಯಾನದಲ್ಲಿ ಮಾಡಿರುವಂತೆ) ಹೂಡಿಕೆಯ ಕಾರ್ಯಕ್ರಗಳಲ್ಲಿ ವಿಸ್ತೃತ ಕಾರ್ಯನೀತಿಯ ಫಲಿತಾಂಶಗಳನ್ನು ವಿಷದೀಕರಿಸುವುದು.
- ಬಲವಾದ ಮೇಲ್ವಿಚಾರಣೆಯ ಆಧಾರದ ಮೇಲೆ, ಭಾರತ ಸರ್ಕಾರವು ಕೈಗೊಂಡ ಆರ್ಥಿಕ ವರ್ಗಾವಣೆಗಳೊಂದಿಗೆ ರಾಜ್ಯಗಳು (ಹಾಗೂ ನಗರಗಳು) ತಮ್ಮದೇ ಆದ ಯೋಜನೆಗಳು ಹಾಗೂ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸುವಂತೆ ಉತ್ತೇಜಿಸುವುದು ಹಾಗೂ ಅನುದಾನವನ್ನು ಕೊಡುಗೆಗಳಿಂದ ವಿಘಟಿಸುವುದು
- ಸೇವಾ ಮಟ್ಟದ ಮಾನದಂಡಗಳು ಹಾಗೂ ಇತರ ಕ್ರಮಗಳು, ಅಂದರೆ, ನಗರಗಳ ರಾಷ್ಟ್ರೀಯ ನೈರ್ಮಲ್ಯ ಶ್ರೇಯಾಂಕಗಳ ಸಾಧನೆಯ ಮೂಲಕ ಪ್ರತಿಪಾದಿಸಿದಂತೆ, ಯೋಜನಾ ಅನುದಾನವನ್ನು ಕಾರ್ಯನಿರ್ವಹಣೆಯೊಂದಿಗೆ ಬೆಸೆಯುವುದು
- ಪುರಸಭಾ ಕಾಯಿದೆಗಳು ಹಾಗೂ ನೀತಿ-ನಿಯಮಗಳಲ್ಲಿ ತಿದ್ದುಪಡಿ ಮಾಡುವ ಮೂಲಕ ಫಲಿತಾಂಶಗಳನ್ನು ನಿಯೋಜಿಸುವುದು/ ಕಡ್ಡಾಯಗೊಳಿಸುವುದು
- (ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ) ಪಾರಿಸಾರಿಕ ನಿಯಂತ್ರಣಗಳನ್ನು ಬಲಗೊಳಿಸುವುದು
- ಅನುದಾನದ ಹಣ, ಇತ್ಯಾದಿಗಳನ್ನು ಈ ಉದ್ದೇಶಗಳಿಗಾಗಿ ಒದಗಿಸುವ ಮೂಲಕ, ಸ್ಥಳೀಯ ಸಂದರ್ಭಗಳಿಗೆ ಹೆಚ್ಚು ಸ್ಪಂದಿಸುವ ರೀತಿಯಲ್ಲಿ

ಅನುದಾನದಲ್ಲಿ ನಮ್ಯತೆಯನ್ನು ಸೇರ್ಪಡೆ ಮಾಡಿ ನಿರ್ದಿಷ್ಟವಾಗಿ ತಿಳಿಸಬೇಕಾದ ಪ್ರಮುಖ ಫಲಿತಾಂಶಗಳೆಂದರೆ:

### A. ಎಲ್ಲರಿಗೂ ಸೇವೆಗಳ ವಿಸ್ತರಣೆ / ಸಾರ್ವತ್ರಿಕ ಲಭ್ಯತೆ, ಅದರಲ್ಲೂ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ

ಸಾರ್ವತ್ರಿಕ ಲಭ್ಯತೆ ಹಾಗೂ ಸುಧಾರಿತ ಸೇವಾ ಮಟ್ಟಗಳನ್ನು ಸಾಧಿಸಲು, ಕೇವಲ ಮೂಲಭೂತ ಸವಲತ್ತುಗಳನ್ನು ರೂಪಿಸುವ ಬದಲು, ಗಮನವನ್ನು ಹೆಚ್ಚು ಸೇವಾ ನೀಡಿಕೆಯತ್ತ ಹೊರಳಬೇಕು. ಬಡವರಿಗೆಂದು ಒದಗಿಸುವ ಸೇವೆಗಳಿಗೆ ಸಂಬಂಧಿಸಿದಂತೆ ಮೂಡುವ ನಿರ್ದಿಷ್ಟ ಸವಾಲುಗಳತ್ತ ವಿಶೇಷ ಗಮನವನ್ನು ನೀಡಬೇಕು: ಒಡೆತನದ ಸುರಕ್ಷತೆ, ಕೈಗೆಟಕುವ ಬೆಲೆಯ ಸಣ್ಣ ಮನೆಗಳು ಹಾಗೂ ಅಲ್ಲಿನ ಸ್ಥಳದ ನಿರ್ಬಂಧಗಳು. ಸಣ್ಣ ಹಾಗೂ ಮಧ್ಯಮ ಗಾತ್ರದ ಪಟ್ಟಣಗಳು ಹಾಗೂ ದುರ್ಬಲ ಪ್ರದೇಶಗಳು ಮತ್ತು ರಾಜ್ಯಗಳಿಗೆ ವಿಶೇಷ ಗಮನ ನೀಡುವ ಅಗತ್ಯವಿದೆಯೇ ಎಂದು ನಿಷ್ಕರ್ಷೆ ಮಾಡಲು, ಅವುಗಳ ಪರೀಕ್ಷಣೆಯನ್ನು ಮಾಡಬೇಕು.

### B. ಸೂಕ್ತ ವಿಧಾನಗಳ ಮೂಲಕ ತ್ಯಾಜ್ಯ ನೀರಿನ 100% ಸುರಕ್ಷಿತ ಸಂಗ್ರಹಣೆ, ಸಾಗಣೆ ಹಾಗೂ ಸಂಸ್ಕರಣೆಯನ್ನು ಖಚಿತಪಡಿಸುವುದು

ಬಯಲು ಶೌಚವನ್ನು ನಿರ್ಮೂಲನ ಮಾಡಿ, ಕುಟುಂಬ ಮಟ್ಟದಲ್ಲಿ ಕೊರತೆಯನ್ನು ನೀಗಿಸುವತ್ತ ಸ್ವಚ್ಛ ಭಾರತ ಅಭಿಯಾನವನ್ನು ರೂಪಿಸಲಾಗಿದೆ. ಇದನ್ನು ಸಾಧಿಸುವ ಸಲುವಾಗಿ, ಸಾರ್ವಜನಿಕ ಆರೋಗ್ಯ ಹಾಗೂ ಪಾರಿಸಾರಿಕ ಪ್ರಯೋಜಗಳನ್ನು ಖಾತರಿಪಡಿಸಿಕೊಳ್ಳಲು, ಅದಕ್ಕೆ ಪೂರಕವಾಗಿ ತ್ಯಾಜ್ಯ ನೀರಿನ ಸುರಕ್ಷಿತ ಸಾಗಣೆ ಹಾಗೂ ಸಂಸ್ಕರಣೆ/ಮರುಬಳಕೆಯನ್ನು ಕೈಗೊಳ್ಳಬೇಕು.